ಮಹಾವೀರ ಕಾಸರ, ಶಿವಮೊಗ್ಗ
ಮೌಢ್ಯ ನಿಷೇಧಿಸಬೇಕೆನ್ನುವ ರಾಜಕೀಯ ಪಕ್ಷಗಳೇ ಮಾಟ, ಮಂತ್ರ, ನಿಂಬೆಹಣ್ಣುಗಳ ಮೊರೆ ಹೋಗುತ್ತವಲ್ಲ?



ನಿಂಬೆಹಣ್ಣಂತೂ ಮೌಢ್ಯವಲ್ಲ. 'ನಿಮ್ಮ ಭವಿಷ್ಯಕ್ಕೆ ಹುಳಿ ಹಿಂಡುತ್ತೇವೆ' ಎನ್ನುವ ವಾರ್ನಿಂಗ್ ಸಿಂಬಲ್ ಅದು.

ಸಿ. ಆನಂದಪ್ಪ, ಬೆಂಗಳೂರು
ರಾಧೆ ಕೃಷ್ಣನನ್ನು ಕೂಗಿ ಕೂಗಿ ಕರೆಯುತ್ತಾಳೆ. ಏಕೆ?
ಗೋಪಿಯರ ಕಲರವ, ಕೊಳಲಿನ ಸದ್ದನ್ನು ಮೀರಬೇಕಲ್ಲ.

ಬಾಲಕ, ಬೀದರ್
ತಲೆಯೇರಿ ಕುಳಿತ ರಾಜಕಾರಣಿ ತನಗಿಂತಲೂ ಜಾಣ, ಪ್ರಾಮಾಣಿಕರನ್ನು ಕೈಬಿಡುವನಂತೆ...?
ಬಿಡಲೇಬೇಕಲ್ಲ. ಹೊಲಸು ತಿನ್ನೋ ಹಂದಿಗೆ ಬಾದಾಮಿ ಹಲ್ವ ರುಚಿಸಲ್ಲ.

ಆರ್. ಮಧುಸೂದನ್, ಹಾಸನ
ಹೆಣ್ಣಿಗೆ ನಾಚಿಕೆ ಭೂಷಣವೋ ಅನುಮಾನ ಭೂಷಣವೋ?



ಈಗಿನ ಕಾಲದಲ್ಲಿ ಪರ್ಸಿನಲ್ಲೊಂದು ಪೆಪ್ಪರ್ ಸ್ಪ್ರೆಯೇ ಭೂಷಣವು.

ರವಿ ಎಂ. ಪೈ, ಹೊನ್ನಾವರ
ಹೆಂಡತಿ ಬೇಕು. ಆದರೆ ಹೆಣ್ಣುಗು ಬೇಡ. ಏಕೆ?
ಮಾವ ಕೊಡುವ ಬೆಂಬಲವನ್ನು ಅಳಿಯ ಕೊಡುವುದಿಲ್ಲವಲ್ಲ.

ನಾಜ್ಯೋತಿ, ಹೂವಿನಹಡಗಲಿ
ಭಾರತೀಯ ಅಮ್ಮನಿಗೆ ವಿದೇಶಿ ಪಾಲನೆ ಪೋಷಣೆಯ ಕ್ರಮ ತರವೆ?
ಶುದ್ಧ ಭಾರತೀಯರಿಗೆ ತರವಲ್ಲ. ದೇಸೀ ದೇಹದಲ್ಲಿರುವ ವಿದೇಶಿ ಆತ್ಮಗಳಿಗೆ ಪರ್ಫೆಕ್ಟ್.

ಎಚ್.ಎಂ. ಅನಂತಪದ್ಮನಾಭ, ಮೈಸೂರು
ಹೆತ್ತ ತಾಯಿಗೂ, ಹೊತ್ತ (ಬಾಡಿಗೆ) ತಾಯಿಗೂ ವ್ಯತ್ಯಾಸವೇನು?
ಒಂದು ರಕ್ತ ಸಂಬಂಧ, ಇನ್ನೊಂದು ರಿಕ್ತ ಸಂಬಂಧ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
ಹಳಗನ್ನಡ, ಹೊಸಗನ್ನಡಗಳಂತೆಯೇ ಟೀವಿ ನಿರೂಪಕರದು ಯಾವ ಕನ್ನಡ ಹೇ ರಾಂ?
ಕೊಲೆಗನ್ನಡ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ
ಹುಚ್ಚು ಬಿಡದೆ ಮದುವೆ ಆಗಲ್ಲ; ಮದುವೆ ಆಗದೆ ಹುಚ್ಚು ಬಿಡಲ್ಲ. ಇದರ ನಿಜವಾದ ಗುಟ್ಟೇನು?
ಲಿವಿಂಗ್ ಟುಗೆದರ್ರನ್ನೇ ಮುಂದುವರೆಸುವ ಸುಪ್ತ ಹಂಬಲ.

ವಿ. ಹಮೀದ್, ವಿಟ್ಲ
ಹುಡುಗಿಯನ್ನು ಬಣ್ಣದ ಚಿಟ್ಟೆಗೆ ಹೋಲಿಸುತ್ತಾರೆ. ಏಕೆ ಗುರು?
ಚಿಟ್ಟೆ/ಹುಡುಗಿಯ ಚಲನದತ್ತಲೇ ಎಲ್ಲರ ಗಮನ, ಕೈಗೆಟುಕಿದರೆ ಹಿಡಿದುಕೊಳ್ಳುವ ಆಸೆ ಇರುತ್ತಲ್ಲ!

ಕುಮಾರ ಚಲವಾದಿ, ಹಾಸನ
ಹೆಣ್ಣು, ಹೊನ್ನು, ಮಣ್ಣು; ನಿಮ್ಮ ಮೊದಲ ಆಯ್ಕೆ ಯಾವುದು ಗುರುಗಳೆ?
ಆಯ್ಕೆಯೇ ಇರಲಿಲ್ಲ. ನಾನು ಜಗತ್ತಿಗೆ ಕಣ್ಣುಬಿಡುವ ಹೊತ್ತಿಗೇ ಹೆಣ್ಣು ನನ್ನನ್ನು ಹೊತ್ತಿದ್ದಳು.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
ಅವರವರ ಹಣೆಬರಹ ಅವರವರೆ ಬರೆದುಕೊಳ್ಳುವ ಹಾಗಿದ್ದರೆ?
ಗರ್ಭಸ್ಥ ಶಿಶುವಿಗೆಂದು ಅಲ್ಲಲ್ಲಿ 'ಬ್ರಹ್ಮಲಿಪಿ ಟ್ಯುಟೋರಿಯಲ್ಸ್' ಓಪನ್ ಆಗುತ್ತಿತ್ತು.

ಅಮರಯ್ಯಾ ಪತ್ರಿಮಠ, ಸುರಪುರ
ಕೆಲವರ ಮಾತುಗಳು ಗರಗಸದಂತೆ ಇರುತ್ತವಲ್ಲ...?
ಮರಗಟ್ಟಿದ ಮನ ತುಡಿಯಬೇಕಾದರೆ ಹಾಗಿರುವುದು ಅವಶ್ಯ.

## ಬಹುಮಾನಿತ ಪ್ರಶ್ನೆ

ಪಿ.ಎನ್. ಶ್ರೀವತ್ಸ, ಬೆಂಗಳೂರು
ಗಂಡ ಹೆಂಡಿರಲ್ಲಿ ಮನಸ್ತಾಪ ಬಂದಾಗ ಅವರು ಉತ್ತರ – ದಕ್ಷಿಣ ಅನ್ನುವರು; ಪೂರ್ವ – ಪಶ್ಚಿಮ ಏಕಲ್ಲ?
ಕಂಪಾಸ್ ನಿಯಮ; ಪೂಪ ಎಡಬಲ; ಜೋಡಿ ಸೂಚಕ. ಉದ ಮೇಲುಕೀಳು; ಜಗಳ ಸೂಚಕ.

ಕೊಟ್ಟೂರು ಜವಳಿ ಜಯ್ಯಣ್ಣ, ದಾವಣಗೆರೆ
ಹೊಟ್ಟೆಕಿಚ್ಚಿಗೂ, ಕಾಡ್ಗಿಚ್ಚಿಗೂ ಏನು ವ್ಯತ್ಯಾಸ?
ಇಲ್ಲಿ ಬಾಲಬಡುಕರಿಗೆ ಹಬ್ಬ, ಅಲ್ಲಿ ಲಾಭಬಡುಕರಿಗೆ ಹಬ್ಬ.

ಸಮತಾ, ತೆಲಂಗಾಣ
ವಿವಾಹದ ನಂತರ ಗಂಡನಿಗೆ ಹೆಂಡತಿಯೆಂಬ 'ಹೆಂಡ'ದ ನಶೆಯೋ ಅಥವ ಹೆಂಡತಿಗೆ 'ಗಂಡ'ನೆಂಬ ಗಂಡಾಂತರವೋ?
ಗಂಡನಿಗೆ ಮೊದಮೊದಲು ನಶೆ, ನಂತರ ಕಿಕ್; ಹೆಂಡತಿಗೆ ಗಂಡನಿಂದ ಗಂಡೋಲದ (ತುತ್ತು) ಹಕ್ಕು.

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ
ಕುಡಿಯುವುದು ಇತ್ತೀಚೆಗೆ ಫ್ಯಾಷನ್ ಆಗಿಬಿಟ್ಟದೆಯಲ್ಲಾ....?



ಈ ಮಾತನ್ನು ಮೊದಲು ವಸುದೇವ ಬಲರಾಮನಿಗೆ ಹೇಳಿದನಂತೆ.

ಕೆ.ಹೆಚ್.ಆರ್.ಕೆ. ರೆಡ್ಡಿ, ಬೆಂಗಳೂರು
ದುಡ್ಡು ಸಂಪಾದಿಸುವುದಕ್ಕಿಂತ ದೊಡ್ಡ ಹುಚ್ಚು ಯಾವುದು ಗುರು?
ಅದೇ ದುಡ್ಡನ್ನು ತಾನೂ ಅನುಭವಿಸದೆ, ಅನ್ಯರಿಗೂ ಕೊಡದೆ ಬಚ್ಚಿಡುವುದು.

ಮಲ್ಲಿಕಾರ್ಜುನ ಬಗಲಿ, ಜತ್ತ
ಅತಿಥಿಗಳು ಬಂದರೆ ಖರ್ಚೆಂದು ಜನ ಹೆದರುವಾಗ ಆಸ್ಪತ್ರೆಗಳಲ್ಲಿ 'ರೋಗಿಗಳೇ ನಮ್ಮ ಅತಿಥಿಗಳು' ಎಂದೇಕೆ ಬರೆದಿರುತ್ತಾರೆ?
ತಿಥಿ ಶೋಕದ ದಿನ; ಅತಿಥಿ ಹಬ್ಬದ ದಿನ; ರೋಗಿಗಳಿದ್ದರೇನೇ ಅವರಿಗೆ ಹಬ್ಬವಂತೆ.

■ ರಾಮ್